ನಂದೀದುರ್ಗ ಡಿವೀಜ್ಞ್.

ನಂದೀದುರ್ಗ ಡಿವೀಜ್ಞ್ ಡಿಸ್ಟ್ರಿಕ್ಟ್ ಜಡ್ಜ್ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 43.

ಮೃತಪಟ್ಟ ರಂಗಸ್ವಾಮಯ್ಯಂಗಾರ್ರು, ಶ್ರೀನಿವಾಸಮೂರ್ತಿ ಇವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಶ್ರೀರಂಗಮ್ಮ, ಮೃತಪಟ್ಟ ಸದರೀ ರಂಗಸ್ವಾಮಯ್ಯಂಗಾರ್ರು, ಶ್ರೀನಿವಾಸಮೂರ್ತಿಗೆ ಕಂಜತಿ ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸುಲತ್ತಾ ಪೇಟೆ ಸ್ಥಳದ ಶ್ರೀರಂಗಮ್ಮನು, ಡಿಟೋ ವಾಸಸ್ಥರಾಗಿ ಮೃತಪಟ್ಟ ರಂಗಸ್ವಾಮಯ್ಯಂಗಾರ್ರು ಶ್ರೀನಿವಾಸಮೂರ್ತಿ ಇವರ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ಮೈನರ್ ಮಗ ನರಸುಂಹ್ಮಯ್ಯಂಗಾರ್ರಿಗೋಸ್ಕರ್, ರಾಮಸ್ವಾಮಯ್ಯಂಗಾರ್, ಶಾಮಯ್ಯಂಗಾರ್ರು ಗಾರ್ಡಿಯನ್ನಾಗಿ ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀರಂಗಮ್ಮನ ಅರ್ಜೀಯನ್ನು 1884ನೇ ಇಸವಿ ಮೇ ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃಪಟ್ಟ ರಂಗಸ್ವಾಮಯ್ಯಂಗಾರ್ ಶ್ರೀನಿವಾಸಮೂರ್ತಿ ಆಸ್ತಿಗೆ ಹಕ್ಕುದಾರರಾವ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಏಪ್ರೆಲ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳೀಯಾವ ಡಿಕ್ರೀ ದೇಣೇದಾರ ಚಿಕ್ಕ ಬಳ್ಳಾಪುರದ ತಾಲ್ಲೂಕು ಗಂಗನವುದೆ ಗ್ರಾಮದಲ್ಲಿರುವ ಬ್ಯಾಡರ

ಕದರಂಣನ ಮಗ ದೊಡ್ಡನರಸುಹ್ಮನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ವ್ಯಾಜ್ಯದ ನಂಬರ್ 78.

ಹುಕ್ಕುಂ.

ಮೇಲ್ಕಂಡ ದೊಡ್ಡನರಸುಹ್ಮನು ಖುಲಾಸೇಯಾಗಬೇಕೆಂದು ಕೋರಿ ಬರದುಕೊಂಡ ಅರ್ಜೀಯು ಟಿ. ಆರ್. ಯಿ. ತಂಬುಚೆಟ್ಟಿಯಾರ್, ಡಿಸ್ಟ್ರಿಕ್ಟ್ ಜಡ್ಜ್ರೀಯವರ ರೂಬರೂ ಅರ್ಜೀದಾರನ ಪರವಾಗಿ ಯಿವನ ಸಮಕ್ಷಮದಲ್ಲಿಯೂ ಮತ್ತು ಐರ್ಜ್ ಅರ್ಜೀದಾರನ ಲೇಣೇವಾರರಾದ ವೆಂಕಟಸಾಮಿ ಪೈರೇರ ಗೈರ್ ಹಾಜರ್, ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ತಾವೇ ಖುದ್ದಾಗಿಯೂಗಲಿ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪು ಹೋದರು, ಯಾರಂದರೆ– 1ನೇ ವೆಂಕಟಸಾಮಿ, 2ನೇ ದೊಡ್ಡವೀರಭದ್ರಂಣ, 3ನೇ ಚಿಕ್ಕವೀರಭದ್ರಂಣ, 4ನೇ ಶೈರಂಣ, 5ನೇ ನಾರಣಯ್ಯರ್, 6ನೇ ಅದಾಲತ್ತು ಬ್ಯಾಂಕ್, 7ನೇ ಪ್ರಟ್ಟಂಣ, 8ನೇ ಸುಬ್ರಹ್ಮಣ್ಯೇಶ್ವರ ಸ್ವಾಮಿ ಬ್ಯಾಂಕ್, 9ನೇ ಗಿಡ್ಡಂಣ, 10ನೇ ಲಕ್ಷ್ಮೀನಾರಣಪ್ಪ.

ಸದರೀ ದೊಡ್ಡನರಸುಹ್ಮನು ದಿವಾಳೀಯಾದವನೆಂದುನ್ನು ಸಿವಿಲ್ ಪ್ರೊಸೀಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಈ ಕೋರ್ಟು ಕರಸ್ತೇದಾರ್ರು ಇನ್ನು ಮುಂದೆ ನಮೂದುಮಾಡಿದಂತೆ ಐರ್ಜ್ ದಿವಾಳೀಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ರ್ಮಾಡಲ್ಪಡತಕ್ಕದ್ದೆಂದುನ್ನು ಸದರೀ ರಿಸೀವರಾದವನು ಪಡನೆ ದಿವಾಳೀಯಾದವನ ಜಿಂದಗಿಗೆ ಜವಾಪ್ ಮಾಡತಕ್ಕ ಬಗ್ಯೂ ನಿಗೇವಾನೀ ಮಾಡತಕ್ಕ ಬಗ್ಯೂ ಸಹ ತನ್ನ ರಿಸೀವರ ಕೆಲಸಗಳಿಗೆ ಉಪ್ಪೋಕ್ತ ಪಡತಕ್ಕದ್ದೆಂದೆನ್ನು ಮತ್ತು ಸದರೀ ರಿಸೀವನು ತಾನು ನಡಸುವ ಕೆಲಸಗಳ ಪ್ರತಿ ಫಲಕ್ಕಾಗಿ ದಿವಾಳೀಯಾದವನ ಲೇಣೇದಾರರಿಗೆ ಬಟವಾಡೆ ಮಾಡಿದ ಮೊಲಗಿನ ಬಾಕೀ ಹಣವಲ್ಲಿ ದರ ಕೇಕಡಾ 5 ರೂಪಾಯಿ ಮೇರೆ ಕಮ್ಮಿಷನ್ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನು ಸಹ ಹುಕ್ಕುಂ ಮಾಡಲ್ಪಟ್ಟು ಇದೆ.

ಸ್ರ್ 1884ನೇ ಇಸವಿ ಏಪ್ರಿಲ್ 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಆರ್. ಎ. ತಂಬುಚೆಟ್ಟಿ,
ಡಿಸ್ಟ್ರಿಕ್ಟ್ ಜಡ್ಜ್.